# ಚಳಿಗಾಲಕ್ಕೆ ಸಂಗಾತಿ ಡೆನಿಮ್

ಚಳಿಗಾಲಕ್ಕೆ ಡೆನಿಮ್ ಉಡುಪು ಸೂಕ್ತ. ಇದರಲ್ಲಿ ವೈವಿಧ್ಯಮಯ ಉಡುಗೆ ಬಂದಿದ್ದು, ಫ್ಯಾಷನ್‌ಪ್ರಿಯರನ್ನು ಸೆಳೆಯಲಾರಂಭಿಸಿದೆ.



ಜೀನ್ಸ್‌ಗೆ ಪರ್ಯಾಯವೆನಿಸಿರುವ ಡೆನಿಮ್ ಎಲ್ಲ ಕಾಲಕ್ಕೂ ಸಲ್ಲುವ ಉಡುಗೆ. ಸುಮಾರು ಎಂಬತ್ತರ ದಶಕದಲ್ಲಿ ಡೆನಿಮ್ ಉಡುಪುಗಳು ಖ್ಯಾತಿ ಗಳಿಸಿದ್ದವು. ಈಗ ಮತ್ತೆ ಡೆನಿಮ್ ರೆಟ್ರೊ ಮೂಡ್ ಉಳಿಸಿಕೊಳ್ಳಲು ಫ್ಯಾಷನ್ ಜಗತ್ತಿನಲ್ಲಿ ಸ್ಥಾನ ಪಡೆದುಕೊಂಡಿದೆ.

ಸಾಂಪ್ರದಾಯಿಕ ಉಡುಗೆಗಳಿಗೆ ಹೋಲಿಸಿದಲ್ಲಿ ಈಗ ಪಾಶ್ಚಿಮಾತ್ಯ ಉಡುಗೆಗಳ ಟ್ರೆಂಡ್ ಜನಪ್ರಿಯವಾಗಿದ್ದರೂ, ಪರಿಸರ ಸ್ನೇಹಿ ಡೆನಿಮ್‌ನ ಉಡುಗೆಗಳು ವೈವಿಧ್ಯದಲ್ಲಿ ಮುಂಚೂಣಿಯಲ್ಲಿವೆ. ಪರಿಸರಸ್ನೇಹಿ ಉಡುಗೆಗಳು ಒಂದು ರೀತಿಯ ಸ್ಟೈಲ್ ಸ್ಟೇಟ್‌ಮೆಂಟ್ ಕೂಡ ಆಗಿದ್ದು, ಖಾದಿಯಂತೆ ಎಲ್ಲ ಕಾಲಕ್ಕೂ ಸೂಕ್ತವೆನಿಸಿವೆ. ಅದರಲ್ಲೂ ಫೇಡೆಡ್ ಡೆನಿಮ್ ಎಲ್ಲ ಮಹಿಳೆಯರ ಮೆಚ್ಚು ಕೂಡ ಆಗಿದೆ. ಡೆನಿಮ್ ಜೀನ್ಸ್ ಜೊತೆಗೆ ಸ್ಲಿಮ್ ಟೀ ಶರ್ಟ್ ಮತ್ತು ವೇಸ್ಟ್ ಕೋಟ್ ಬಹಳ ಚೆನ್ನಾಗಿ ಹೊಂದುತ್ತದೆ. ಚಳಿಗಾಲದಲ್ಲಿ ಡೆನಿಮ್ ಜೀನ್ಸ್ ಜೊತೆಗೆ ಲೆದರ್ ಜಾಕೆಟ್‌ಗೆ ಹೆಚ್ಚಿನ ಬೇಡಿಕೆ ಇದೆ. ತಿಳಿನೀಲಿ ಬಣ್ಣದ ಜೀನ್ಸ್, ಶರ್ಟ್, ಜಂಪ್‌ಸೂಟ್, ಫ್ರಾಕ್‌ಗಳು ಯುವತಿಯರನ್ನು ಹೆಚ್ಚಾಗಿ ಸೆಳೆಯುತ್ತಿವೆ.

ಚಳಿಗಾಲದಲ್ಲಿ ತಿಳಿನೀಲಿ ಜೊತೆಗೆ ಕಂದು ಬಣ್ಣ ಹಾಗೂ ದೊಡ್ಡ ದೊಡ್ಡ ಪ್ರಿಂಟ್‌ಗಳ ಉಡುಗೆ ಸೂಕ್ತವೆನಿಸುತ್ತವೆ. ಕುರ್ತಾದಲ್ಲೂ ಕೂಡ ಸಿಂಗಲ್ ಶೋಲ್ಡರ್ ಡ್ರೆಸ್ ಫ್ಯಾಷನ್ ಬಯಸುವ ಮಹಿಳೆಯರಿಗೆ ಖುಷಿಕೊಡುವ ಉಡುಪು ಎನಿಸಿದೆ.

ಡೆನಿಮ್ ಉಡುಗೆ ಜನಪ್ರಿಯವಾಗಲು ಕಾರಣ ಇದರ ಬಣ್ಣ ಮಾಸದ ಗುಣ, ನೆರಿಗೆ, ಸುಕ್ಕು ಆಗದೇ ಇರುವ ಹಾಗೂ ವಿಭಿನ್ನ ವೈವಿಧ್ಯದ ಉಡುಗೆಗಳು ಲಭ್ಯವಾಗುತ್ತಿರುವುದು. ಹೀಗಾಗಿ ಸೆಲೆಬ್ರಿಟಿಗಳು, ಮಾಡೆಲಿಂಗ್ ತಾರೆಯರು ಡೆನಿಮ್ ಉಡುಗೆಯತ್ತ ಚಿತ್ತಹರಿಸಿದ್ದಾರೆ. ಡೆನಿಮ್ ಉಡುಪು ಧರಿಸಲು ಆರಾಮದಾಯಕ, ಫ್ಯಾಷನ್ ಹಾಗೂ ಟ್ರೆಂಡಿ ಲುಕ್ ಕೊಡುತ್ತದೆ, ಕೈಗೆಟಕುವ ಬೆಲೆಯಲ್ಲೂ ಲಭ್ಯ. ಅಲ್ಲದೆ ಇದು ಕ್ಯಾಷುವಲ್ ಉಡುಪಾಗಿಯೂ, ನಿತ್ಯ ಕಚೇರಿಗೆ ತೆರಳುವ ಮಹಿಳೆ–ಪುರುಷರು ಧರಿಸಲು ಯೋಗ್ಯ ಎಂಬುದು ಇದರ ಪ್ಲಸ್‌ಪಾಯಿಂಟ್.

ಇದೀಗ ಡೆನಿಮ್‌ನಲ್ಲಿ ಸ್ಕರ್ಟ್, ಜಾಕೆಟ್, ಕೋಟ್ ಮುಂತಾದವು ಲಭ್ಯ. ಇದರ ಜೊತೆಗೆ ಡೆನಿಮ್ ಬ್ಯಾಗ್, ಶೂಗಳಂತಹ ಆಕ್ಸೆಸರೀಸ್ ಕೂಡ ಸಿಗುತ್ತದೆ.

ಸಿಂಥೆಟಿಕ್ ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಡೆನಿಮ್ ಮತ್ತು ರೇಷ್ಮೆ ಎಂದಿಗೂ 'ಔಟ್ ಆಫ್ ಫ್ಯಾಷನ್' ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರವರೆಗೆ ಯಾರು ಬೇಕಾದರೂ ಡೆನಿಮ್ ಬಟ್ಟೆ ಧರಿಸಿ ಖುಷಿ ಪಡಬಹುದು. ಡೆನಿಮ್ ಉಡುಪಿನ ಬೆಲೆ 100 ರೂಪಾಯಿಯಿಂದ ಆರಂಭವಾಗಿ 10 ಸಾವಿರ ರೂಪಾಯಿಗಳವರೆಗೂ ಇದೆ.

ಡೆನಿಮ್‌ನಲ್ಲಿ ಸ್ಟ್ರೆಚ್ ಡೆನಿಮ್‌ಗಳು ಲಿಕ್ರಾ ಹೆಸರಿನಲ್ಲಿ ಬರುತ್ತಿದ್ದು, ಕೂಲ್‌ಮ್ಯಾಕ್ಸ್ ಕೋರ್, ಕೂಲ್‌ಮ್ಯಾಕ್ಸ್ ಆಲ್ ಸೀಸನ್, ಲಿಕ್ರಾ ಡ್ಯುಯೆಲ್ ಎಫ್‌ಎಕ್ಸ್ ಮತ್ತು ಲಿಕ್ರಾ ಬ್ಯೂಟಿ ಮುಂತಾದ ವೈವಿಧ್ಯದಲ್ಲಿ ಗ್ರಾಹಕರನ್ನು ಸೆಳೆಯುತ್ತಿವೆ. ಈ ಎಲ್ಲಾ ಉತ್ಪನ್ನಗಳು ಬಾಳಿಕೆಯಲ್ಲೂ ಸೈ ಎನಿಸಿವೆ.

ಡೆನಿಮ್ ಬಟ್ಟೆ ತಯಾರಿಸಲು ವಿವಿಧ ಗಿಡಗಳ ಉತ್ಪನ್ನಗಳನ್ನು ಬಳಸಲಾಗುತ್ತದೆ. ನ್ಯಾಚುರಲ್ ಇಂಡಿಗೊ, ರೀಮ್, ಇಮೋದಿ ಹಾಗೂ ಹರ್ದಾ ಎಂಬ ಮರಗಳ ಸತ್ವವನ್ನು ಉಪಯೋಗಿಸಿ ಬಟ್ಟೆ ತಯಾರಿಸಲಾಗುತ್ತದೆ. ಜತೆಗೆ ನೈಸರ್ಗಿಕ ಡೈ ಅನ್ನೂ ಬಳಸಿ ಡೆನಿಮ್ ಬಟ್ಟೆಗೆ ಅಂತಿಮ ರೂಪ ನೀಡಲಾಗುತ್ತದೆ. ಹೀಗಾಗಿ ಡೆನಿಮ್ ಪರಿಸರಸ್ನೇಹಿಯಾಗಿಯೂ ಜನಪ್ರಿಯವಾಗಿದೆ. ಡೆನಿಮ್ ಫ್ಯಾಬ್ರಿಕ್‌ನಲ್ಲಿ ಇದೀಗ ಕಲರ್ ಡೆನಿಮ್ ಕೂಡ ಬಂದಿದ್ದು, ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು, ರಂಗು ರಂಗಿನ ಶರ್ಟ್, ಪ್ಯಾಂಟ್ ಧರಿಸಲು ಸಹಕಾರಿಯಾಗಿದೆ. ಫ್ಯಾಷನ್‌ಪ್ರಿಯರನ್ನು, ಕಾಲೇಜು ಹುಡುಗಿಯರನ್ನು ಕಲರ್ ಡೆನಿಮ್ ಕೂಡ ಬಹುವಾಗಿ ಸೆಳೆಯುತ್ತಿದೆ.

ಚಳಿಗಾಲಕ್ಕೆ ಬೆಚ್ಚಗಿನ ಉಡುಪು ಬಯಸುತ್ತದೆ ದೇಹ. ಡೆನಿಮ್ ಜಾಕೆಟ್ ಮೈಗೆ ಬೆಚ್ಚನೆಯ ಅನುಭವ ಮೂಡಿಸುವುದಲ್ಲದೆ, ಮನಕ್ಕೆ ಬೆಚ್ಚನೆಯ ಭಾವವನ್ನೂ ಸ್ಫುರಿಸುತ್ತದೆ. ಇದೇ ಡೆನಿಮ್ ಇಷ್ಟೊಂದು ಟ್ರೆಂಡಿ ಉಡುಗೆಯಾಗಲು ಕಾರಣ ಎನ್ನುವುದು ಫ್ಯಾಷನ್ ತಜ್ಞರ ಅಭಿಮತ.

■ ಯು.ಎ.